**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.**

**ಕ್ರಿ ಮೊ ಸಂಖ್ಯೆ 2713/2021**

**ಪಿರ್ಯಾದಿ ಃ ಟಿ.ಎಂ.ರುದ್ರೇಶ್ ಬಿನ್ ಲೇಟ್ ಟಿ.ಈ.ಮರುಳಪ್ಪ**

**-ವಿರುದ್ದ-**

**ಆರೋಪಿ/ತರುಃ ಶ್ರೀಮತಿ ಜಿ.ಟಿ.ಸುನಂದಮ್ಮ ಕೋಂ ಲೇಟ್ ಎನ್.ಕೆ.ನಾಗರಾಜು**

**ದಂ.ಪ್ರ.ಸಂ. ಕಲಂ 313 ರಡಿಯಲ್ಲಿ ಆರೋಪಿಯ ವಿಚಾರಣಾ ಹೇಳಿಕೆ**

ಪ್ರಶ್ನೆ-1ಃ ಅಭಿಯೋಜನೆ ಪರ ಸಾಕ್ಷಿಗಳ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?
ಉತ್ತರ ಃ ಕೇಳಿದ್ದೇನೆ

ಪ್ರಶ್ನೆ-2ಃ ಪ್ರಾಸಾ-1 ಟಿ.ಎಂ.ರುದ್ರೇಶ್ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 17.09.2018 ರಂದು ಆರೋಪಿಯಾದ ನೀವು ನಿಮ್ಮ ಕೈಗಡ ಸಾಲ ತೀರುವಳಿ ಮತ್ತು ಅಡವಿಟ್ಟಿರುವ ಬಂಗಾರದ ಆಭರಣಗಳನ್ನು ಬಿಡಿಸಿಕೊಳ್ಳುವ ಸಲುವಾಗಿ ಪಿರ್ಯಾದುದಾರರಿಂದ ಸಾಲವಾಗಿ ರೂ.5,00,000/- ಗಳನ್ನು ಪಿರ್ಯಾದುದಾರರ ಖಾತೆ ಇರುವ ಸಿ.ಡಿ.ಸಿ.ಸಿ. ಬ್ಯಾಂಕ್ ಬೀರೂರು ಖಾತೆ ನಂ.120001608442 ರ ಚೆಕ್ ಸಂಖ್ಯೆ 429577 ರ ಅಕೌಂಟ್ ಪೇಯಿ ಚೆಕ್ ಮೂಲಕ ಆರೋಪಿಯಾದ ನಿಮ್ಮ ಖಾತೆಗೆ ಜಮಾ ಮಾಡಿಕೊಂಡಿರುತ್ತೀರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರ ಃ ಸುಳ್ಳು

ಪ್ರಶ್ನೆ-3ಃ ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿವಸ ಆರೋಪಿಯಾದ ನೀವು ರೂ.500/- ಮುಖಬೆಲೆಯ ಇ-ಸ್ಟಾಂಪ್ ಪತ್ರದ ಮೇಲೆ ಪ್ರಾಮಿಸರಿ ಪತ್ರವನ್ನು ಪಿರ್ಯಾದುದಾರರ ಹೆಸರಿಗೆ ಬರೆದುಕೊಟ್ಟು, ಸದರಿ ಹಣಕ್ಕೆ ವಾರ್ಷಿಕ ಶೇಕಡ 12 ರಂತೆ ಕೊಡಲು ಒಪ್ಪಿದ್ದು, ನಂತರ ಪಿರ್ಯಾದುದಾರರು ಸದರಿ ಅಸಲು ಹಣ ಮತ್ತು ಬಡ್ಡಿಯನ್ನು ನೀಡುವಂತೆ ಕೇಳಿದಾಗ, ಆರೋಪಿಯಾದ ನೀವು ದಿನಾಂಕ 18.05.2021 ರಂದು ಸದರಿ ಅಸಲು ಹಣ ಮತ್ತು ಬಡ್ಡಿ ಬಾಬ್ತು ರೂ.6,75,000/- ಗಳನ್ನು ಮೂರು ತಿಂಗಳ ಒಳಗೆ ಕೊಡುವುದಾಗಿ ತಿಳಿಸಿ ನಿಮ್ಮ ಖಾತೆ ಹೊಂದಿರುವ ಕೆನರಾ ಬ್ಯಾಂಕ್, ತರೀಕೆರೆ ಶಾಖೆಯ ಚೆಕ್ ಸಂಖ್ಯೆ 828720 ನ್ನು ರೂ.6,75,000/- ಗಳಿಗೆ ಮುಂದಿನ ದಿನಾಂಕ 18.08.2021 ನ್ನು ನಮೂದು ಮಾಡಿ ಪಿರ್ಯಾದುದಾರರಿಗೆ ನೀಡಿರುತ್ತೀರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?
ಉತ್ತರ ಃ ಸುಳ್ಳು

ಪ್ರಶ್ನೆ-4 ಃ ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಚೆಕ್ಕನ್ನು ಪಿರ್ಯಾದಿಯು ದಿನಾಂಕ 18.08.2021 ರಂದು ತನ್ನ ಖಾತೆ ಇರುವ ಕೆನರಾ ಬ್ಯಾಂಕ್, ತರೀಕೆರೆ ಶಾಖೆಯಲ್ಲಿ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ಸದರಿ ಚೆಕ್ಕು ಆರೋಪಿಯಾದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಕಾರಣಕ್ಕಾಗಿ ಅಮಾನ್ಯಗೊಂಡಿದೆ ಎಂದು ಚೆಕ್ ಮತ್ತು ಹಿಂಬರಹವನ್ನು ದಿನಾಂಕ 18.08.2021 ರಂದು ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-5 ಃ ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅನಂತರ ಪಿರ್ಯಾದುದಾರರು ಆರೋಪಿಯಾದ ನಿಮಗೆ ದಿನಾಂಕ 21.08.2021 ರಂದು ವಕೀಲರ ಮೂಲಕ ನೋಟೀಸ್ ನೀಡಿದ್ದು, ಸದರಿ ನೋಟೀಸು ಆರೋಪಿಯಾದ ನಿಮಗೆ ಜಾರಿಯಾಗದೆ ನಾಟ್ ಕ್ಲೈಮಡ್ ಎಂದು ದಿನಾಂಕ 07.09.2021 ರಂದು ವಾಪಸ್ಸು ಬಂದಿದ್ದು, ಆದರೂ ಸಹ ಆರೋಪಿಯಾದ ನೀವು ಯಾವುದೇ ಹಣ ಹಿಂದಿರುಗಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ ಸುಳ್ಳು

ಪ್ರಶ್ನೆ-6 ಃ ಪಿಡಬ್ಲ್ಯು-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಮೋಸ ಮಾಡುವ ಉದ್ದೇಶದಿಂದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ವಿಚಾರ ತಿಳಿದಿದ್ದರೂ ಸದರಿ ಚೆಕ್ ನ್ನು ತನಗೆ ನೀಡಿರುತ್ತೀರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ-7 ಃ ಈ ಕೇಸಿನ ಬಗ್ಗೆ ನೀವು ಏನಾದರೂ ಹೇಳುವುದಿದೆಯಾ?

ಉತ್ತರ ಃ ಇಲ್ಲ

ಪ್ರಶ್ನೆ-8 ಃ ನಿಮ್ಮ ಪರವಾಗಿ ಯಾರಾದರೂ ಸಾಕ್ಷಿಗಳಿದ್ದಾರ ಮತ್ತು ಯಾವುದಾದರೂ ದಾಖಲೆಗಳಿವೆಯಾ?

ಉತ್ತರ ಃ ಇಲ್ಲ

(ಈ ಹೇಳಿಕೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಕೇಳಿದ ನಂತರ ಆರೋಪಿ ಕೊಟ್ಟ ಉತ್ತರವನ್ನು ನಾನೇ ಯಥವತ್ತಾಗಿ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆಯೆಂದು ದೃಢೀಕರಿಸುತ್ತೇನೆ.)

ದಿನಾಂಕ ಃ 07.12-2022 ಸಹಿ

**(ಶಿವಕುಮಾರ್.ಆರ್)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ತರೀಕೆರೆ.**